ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

## KANNADA - IV SEMESTER BA

## 25UBA41K: ಕಲಾ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರಿಸಿ. (200 ಪದಗಳಿಗೆ ಮೀರದಂತೆ)** 3x10=30

1. ಮೇರಿ ಕ್ಯೂರಿಯ ಸಾಧನೆಗಳು ಯಾವುವು? ವಿವರಿಸಿ.
2. ಅಮೋಘಸಿದ್ಧನ ಜಾತ್ರೆಯ ವೈಶಿಷ್ಟ್ಯವನ್ನು ವಿವರಿಸಿ.
3. ಕಾಲವನ್ನು ಗುರುತಿಸಲು ಮಾನವ ಅಳವಡಿಸಿಕೊಂಡಿರುವ ಮಾಪನಗಳು ಯಾವುವು? ವಿವರಿಸಿ.
4. ರಂಗಭೂಮಿಯು ಹಲವರ ಆಶ್ರಯವನ್ನು ಅವಲಂಬಿಸಿ ಬೆಳೆದ ಬಗೆಯನ್ನು ಪರಿಚಯಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. (100 ಪದಗಳಿಗೆ ಮೀರದಂತೆ)** 4x5=20

1. ತಾತನ ತಿಥಿಯ ದಿವಸ ಮಕ್ಕಳು ಯಾವ ವಿಚಾರಕ್ಕಾಗಿ ಕಚ್ಚಾಡುತ್ತಿದ್ದರು ಏಕೆ? ಚರ್ಚಿಸಿ.
2. ಆಡಳಿತ ಭಾಷೆಯ ಲಕ್ಷಣಗಳನ್ನು ವಿವರಿಸಿ.
3. ಭಕ್ತರಿಗಾಗಿ ಮರುಗುವ ಶಿವನು ಹೇಗೆ ಪ್ರಕಟಗೊಂಡಿದ್ದಾನೆ?
4. ಸುತ್ತೋಲೆ ಎಂದರೇನು? ಸುತ್ತೋಲೆಯಲ್ಲಿರಬೇಕಾದ ಅಂಶಗಳನ್ನು ಪರಿಚಯಿಸಿ
5. ತುತ್ತಿನ ಮರ ಕಥೆಯಲ್ಲಿ ಮಳೆಯ ವರ್ಣನೆ ಹೇಗೆ ಚಿತ್ರಿತವಾಗಿದೆ? ನಿರೂಪಿಸಿ.
6. ಸಮಾಸ ಎಂದರೇನು? ಯಾವುದಾದರೂ ಎರಡು ಸಮಾಸಗಳನ್ನು ಪರಿಚಯಿಸಿ.

**III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** 1x5=5

ನನ್ನ ಯಾವ ಮಾತಿಗೂ ಅವರಲ್ಲಿ ಒಂದು ಪೈಸೆ ಬೆಲೆಯೂ ಇರಲಿಲ್ಲ. ಇವನಂಥಹ ಮೂರ್ಖ ತಮ್ಮ ವಂಶದಲ್ಲಿಯೇ ಯಾರೂ ಇರಲಿಲ್ಲವೆಂದು ನನ್ನನ್ನು ಎಲ್ಲ ವ್ಯವಹಾರಗಳಿಂದಲೂ ಹೊರಹಾಕಿದ್ದರು. ಹಾಗಾಗಿ ಅವರೊಳಗಿದ್ದೂ ಇಲ್ಲದಂತೆ ಬಹಿಷ್ಕಾರಕ್ಕೀಡಾಗಿ ತೆಪ್ಪಗೆ ಕುಳಿತು ಎಲ್ಲವನ್ನೂ ನೋಡುತ್ತಿದ್ದೆ. ಮಾತುಗಳು ಬಲಿಯುತ್ತಿದ್ದವು. ಆ ಗದ್ದಲದ ನಡುವೆ ನನ್ನ ತಲೆ ಒಡೆದು ಚೆಲ್ಲಾಡುತ್ತದೆಂದು ಹೆದರಿಕೆಯಾಗಿ ವರಾಂಡಕ್ಕೆ ಬಂದೆ.

**IV. ಜ್ಞಾನಸುಧಾ ಪ್ರೌಢಶಾಲೆಯಲ್ಲಿ ಖಾಲಿ ಇರುವ ಸಮಾಜ ವಿಜ್ಞಾನ ಅಧ್ಯಾಪನ ಹುದ್ದೆಗೆ ಅರ್ಜಿ ತಯಾರಿಸಿ.** 1x5=5

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ನಿಮ್ಮ ಬಾಲ್ಯದ ಶಾಲೆಯ ದಿನಗಳು

ST. FRANCIS DE SALES COLLEGE ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ.** **1x5=5**

ನಾನು ಸುಮಾರು ಒಂದೂವರೆ ಗಂಟೆಯಲ್ಲಿ ಈ ಲೇಖನ ಮುಗಿಸುತ್ತೇನೆ. ಇಂದು ಮಧ್ಯಾಹ್ನ ಎರಡೂಕಾಲಿಗೆ ಕುಳಿತು ಮೂರೂಮುಕ್ಕಾಲಿಗೆ ಮುಗಿಸುತ್ತಿದ್ದೇನೆ. ಇದರಲ್ಲಿ ಯಾವ ಪ್ಯಾರ ಎಷ್ಟು ಹೊತ್ತಿಗೆ ಮುಗಿಸಿದ್ದೆನೆನ್ನುವ ಪಟ್ಟಿಯನ್ನೂ ಇಡಬಹುದು. ಆದರೆ ಪದಗಳ ಹಂತಕ್ಕೆ ಹೋದಾಗ 'ಕಾಲ' ಜಾರುತ್ತದೆ. ಯಾವುದೇ ಒಂದು ಪದವನ್ನು ನಿರ್ದಿಷ್ಟ ನ್ಯಾನೋ ಸೆಕೆಂಡಿನ ಪರಿಧಿಗೆ ಒಳಪಡಿಸಲು ಯತ್ನಿಸುವಾಗ ಕರಾರುವಾಕ್ಕಾದ ಲೆಕ್ಕಾಚಾರ ಸಿಗುವುದಿಲ್ಲ.

**VII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **10x1=10**

1. ನಾಟ್ಯಶಾಸ್ತ್ರ ಕೃತಿಯನ್ನು ರಚಿಸಿದವರು ಯಾರು?

   ಅ. ವಾಮನ ಆ. ದಂಡಿ ಇ. ಭರತ ಈ. ಕೌಟಿಲ್ಯ

2. ಸಿದ್ದರಾಮ ಚರಿತೆ ಇದು ಯಾರ ಕೃತಿ.

   ಅ. ರಾಘವಾಂಕ ಆ. ಕುವೆಂಪು ಇ. ವಿನಾಯಕ ಈ. ಸಿದ್ಧರಾಮಯ್ಯ

3. ರಂಗಭೂಮಿ ಎಂದರೆ ಜನತೆಯ ವಿಶ್ವ ವಿದ್ಯಾನಿಲಯ ಎಂದು ಹೇಳಿದವರು.

   ಅ. ಶ್ರೀದೇವಿ ಆ. ಸರೋಜಿನಿದೇವಿ. ಇ. ಮಾದೇವಿ ಈ. ನಳಿನಾದೇವಿ

4. ಅಮೋಘಸಿದ್ಧ ಯಾವ ಶತಮಾನದವನು?

   ಅ. 20 ಆ. 16 ಇ. 18 ಈ. 15

5. "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು" ಪದ್ಯವನ್ನು ಬರೆದವರು ಯಾರು?

   ಅ. ಪಂಪ ಆ. ಹರಿಹರ ಇ. ರಾಘವಾಂಕ ಈ. ಜನ್ನ

6. "ಭಕ್ತನಿಗೆ ಭಾಗ್ಯಕೊಡು ಮಕ್ಕಳಿಗೆ ಬಡತನ ಕೊಡು" ಕಥೆಯ ಕರ್ತೃ.

   ಅ. ವಿದ್ಯಾ ಆ. ರಂಜಾನ್ ದರ್ಗಾ ಇ. ಗುರುರಾಜ್ ಈ. ಕಣವಿ

7. "ಕೈಮುಗಿ" ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

   ಅ. ಗಮಕ ಸಮಾಸ ಆ. ದ್ವಿಗು ಸಮಾಸ ಇ. ಕ್ರಿಯಾ ಸಮಾಸ ಈ. ದ್ವಂದ್ವ ಸಮಾಸ

8. ಈ ಕ್ಷಣ ಎಲ್ಲಿದೆ? ಲೇಖನದ ಕರ್ತೃ

   ಅ. ಬಸವರಾಜ ಆ. ಲಂಕೇಶ್ ಇ. ಮಾರಣ್ಣ ಈ. ಅಗ್ನಿ ಶ್ರೀಧರ್

9. ಲಲಿತ ಕಲೆಗಳ ಸಂಗಮ ಕ್ಷೇತ್ರ ರಂಗಭೂಮಿ ಲೇಖನದ ಕರ್ತೃ

   ಅ. ಕೃಷ್ಣಸ್ವಾಮಿ ಆ. ಕಪ್ಪಣ್ಣ ಇ. ಬಸು ಈ. ಡಾ. ಎಚ್ ಕೆ ರಂಗನಾಥ್

10. ಮೇರಿ ಕ್ಯೂರಿಯ ತಾಯಿ ನಾಡು ಯಾವುದು?

    ಎ. ಫ್ರಾನ್ಸ್ ಬಿ. ಪೋಲೆಂಡ್ ಸಿ. ನೆದರ್ ಲ್ಯಾಂಡ್ ಡಿ. ಇಂಗ್ಲೆಂಡ್

*********

ST. FRANCIS DE SALES COLLEGE
EXCELLENCE · EFFICIENCY · TRANSFORMATION
ELECTRONICS CITY, BENGALURU